ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 30-11-1970.

*ಕೆಲಸಗಾರರ ಅದ್ಭುತವಾದ ಸರ್ಕಸ್* (वर्कर्स की वन्डरफुल सर्कस)

ಮಾಸ್ಟರ್ ಸರ್ವಶಕ್ತಿವಂತರಾಗಿರುವಿರಾ? ಈ ಅಧರಕುಮಾರರ (ಕುಟುಂಬದಲ್ಲಿರುವ ಅಣ್ಣಂದಿರು) ಈ ಗುಂಪಿನಲ್ಲಿ ಎಲ್ಲರೂ ಮಾಸ್ಟರ್ ಸರ್ವಶಕ್ತಿವಂತರಾಗಿರುವಿರೋ ಅಥವಾ ಆಗಲು ಬಂದಿರುವಿರೋ? ಆಗಲು ಬಂದಿರುವೆವು ಎನ್ನುವವರು ಕೈ ಎತ್ತಿ. ಇನ್ನುಳಿದ ಆಗಿರುವೆವು ಎನ್ನುವವರು ಮುಂದೆ ಬನ್ನಿ. ಮಾಸ್ಟರ್ ಸರ್ವಶಕ್ತಿವಂತರು ಎಂದರೆ ಸದಾ ಪಾಸ್ ಎಂದಿಗೂ ಫೇಲಾಗುವುದಿಲ್ಲ. ಎಂದಿಗೂ ಯಾವ ಮಾತಿನಲ್ಲಿಯೂ ಫೇಲಾಗುವುದಿಲ್ಲ. ಎಂದಾದರೂ ಭಾವುಕರಾಗುತ್ತೀರಾ? ನಿಮಿತ್ತ ಶಿಕ್ಷಕಿಯಿಂದ ಫೀಲಿಂಗ್ ಪ್ರೂಫ್ ಎಂಬ ಸರ್ಟಿಫಿಕೇಟ್ ಸಿಕ್ಕಿದೆಯಾ? ವರ್ತಮಾನ ಸಮಯಕ್ಕನುಸಾರ ಈ ಮಾತುಗಳು ಸಾಧಾರಣವಾದವುಗಳಲ್ಲ. ವರ್ತಮಾನ ಪುರುಷಾರ್ಥಕ್ಕನುಸಾರ ಸಾಧಾರಣ ಮಾತೂ ಮಹಾನ್ ಎಂದು ಪರಿಗಣಿಸಲಾಗುತ್ತದೆ. ಹೇಗೆ ಎಷ್ಟು ದೊಡ್ಡ ಮನುಷ್ಯನೋ, ಎಷ್ಟು ಸಿರಿವಂತನೋ ಅಷ್ಟು ಸಣ್ಣ, ಕೆಟ್ಟ ಕರ್ಮ ಅಥವಾ ತಪ್ಪಿನ ಚಿಕ್ಕ ಪ್ರಮಾಣದ ದಂಡವೂ ಅವರಿಗೆ ಬಹಳ ದೊಡ್ಡದಾಗುತ್ತದೆ. ಹಾಗಾದರೆ ಈ ರೀತಿ ವರ್ತಮಾನ ಸಮಯದಲ್ಲಿ ಸಾಧಾರಣವೂ ಮಹಾನ್ ಲಿಸ್ಟನಲ್ಲಿ ಪರಿಗಣಿಸಲಾಗುತ್ತದೆ. ಮಾಸ್ಟರ್ ಸರ್ವಶಕ್ತಿವಂತ ಎಂದರೆ ಭಾವುಕತೆಯಿಂದ ಮುಕ್ತ ಎಲ್ಲಾ ಮಾತುಗಳಲ್ಲಿ ಪೂರ್ಣ. ಜ್ಞಾನಪೂರ್ಣ. ಎಲ್ಲಾ ಶಬ್ದಗಳ ಅಂತ್ಯದಲ್ಲಿ ಪೂರ್ಣ ಎಂಬುದು ಬರುವುದು. ಎಷ್ಟು ಪೂರ್ಣರಾಗುವಿರೋ ಅಷ್ಟು ಭಾವುಕತೆಯ ಹರಿತ ಅಥವಾ ಫ್ಲೋ ನಾಶವಾಗುವುದು. ಕಲೆರಹಿತ(ಲೋಪಮುಕ್ತ)ವಾಗಿ ಇರುವುದಕ್ಕೆ ಪೂರ್ಣ ಎಂದು ಹೇಳುತ್ತಾರೆ. ಎಲ್ಲರೂ ಮಾಸ್ಟರ್ ಸರ್ವಶಕ್ತಿವಂತರಾಗಿರುವಿರಾ? ಯಾರು ಕೈ ಎತ್ತಿಲ್ಲವೋ ಅವರೂ ಮಾಸ್ಟರ್ ಸರ್ವಶಕ್ತಿವಂತರಾಗಿದ್ದಾರೆ ಏಕೆಂದರೆ ಸರ್ವಶಕ್ತಿವಂತ ತಂದೆಯನ್ನು ತಮ್ಮವರನ್ನಾಗಿಸಿಕೊಂಡಿರುವರು. ಸರ್ವಶಕ್ತಿವಂತ ತಂದೆಯನ್ನು ಸರ್ವ ಸಂಬಂಧದಿಂದ ತಮ್ಮವರನ್ನಾಗಿ ಮಾಡಿಕೊಂಡಿರುವಿರಿ. ಇದೇ ಮಾಸ್ಟರ್ ಸರ್ವಶಕ್ತಿವಂತನ ಶಕ್ತಿ. ಇಷ್ಟೊಂದು ದೊಡ್ಡ ಪ್ರತ್ಯಕ್ಷ ಪ್ರಮಾಣವಿರುವಾಗ ಮತ್ತೆ ಏಕೆ ತಮ್ಮನ್ನು ಅರಿಯುವುದಿಲ್ಲ ಮತ್ತು ಸ್ವೀಕರಿಸುವುದಿಲ್ಲ. ಈ ಪ್ರತ್ಯಕ್ಷ ಪ್ರಮಾಣ ಸದಾ ಎದುರಿಗೆ ಇದ್ದರೆ ಬಹಳ ಸರಳ ರೀತಿಯಲ್ಲಿ ಮಾಯಾಜೀತ್ ಆಗುವಿರಿ, ತಿಳಿಯಿತೇ? ಸರ್ವ ಸಂಬಂಧಗಳು ಒಬ್ಬನ ಜೊತೆಗೆ ಜೋಡಿಸಿದಾಗ ಬೇರೆ ಮಾತು ಎಲ್ಲಿದೆ? ಏನೂ ಇಲ್ಲದಿರುವಾಗ ಬುದ್ಧಿ ಎಲ್ಲಿಗೆ ಹೋಗುವುದು. ಬುದ್ಧಿ ಅತ್ತ-ಇತ್ತ ಹೋದರೆ ಸರ್ವ ಸಂಬಂಧ ಒಬ್ಬನ ಜೊತೆಗೆ ಜೋಡಿಸಿಲ್ಲವೆಂದು ಸಿದ್ಧವಾಗುತ್ತದೆ. ಜೋಡಿಸುವ ಲಕ್ಷಣವಾಗಿದೆ ಅನೇಕರಿಂದ ಕತ್ತರಿಸುವುದು. ಯಾವ ನೆಲೆಯೂ ಇಲ್ಲದಿರುವಾಗ ಬುದ್ಧಿ ಎಲ್ಲಿಗೆ ಹೋಗುವುದು. ಮತ್ತೆಲ್ಲಾ ನೆಲೆಗಳು ಕತ್ತರಿಸುವವು. ಒಬ್ಬನ ಜೊತೆಗೆ ಜೋಡಿಸಲ್ಪಟ್ಟಿರುತ್ತವೆ. ಬುದ್ಧಿ ಅಲ್ಲಿ ಇಲ್ಲಿ ಓಡುತ್ತದೆ ಎಂಬ ದೂರು ಸಮಾಪ್ತಿಯಾಗುತ್ತದೆ. ಒಳ್ಳೆಯದು.

ಭಟ್ಟಿಯಲ್ಲಿಯೇ ಇರುವಾಗ ಈ ಗುಂಪು ಮತ್ತೇಕೆ ವಿಶೇಷ ರೂಪದಲ್ಲಿ ಭಟ್ಟಿಗೆ ಬಂದಿರುವಿರಿ ಅಥವಾ ಭಟ್ಟಿಯಲ್ಲಿ ಇದ್ದೇವೆ ಆದರೆ ಬ್ಯಾಟರಿ ಎಷ್ಟು ಚಾರ್ಜ್ ಆಗಿದೆ ಎಂದು ಪರಿಶೀಲನೆ ಮಾಡಲು ಬಂದಿರುವಿರಿ? ಚಾರ್ಜ್ ಮಾಡಲು ಬಂದಿರುವಿರೋ ಅಥವಾ ಪರಿಶೀಲನೆ ಮಾಡಲು ಬಂದಿರುವಿರೋ? (ಎರಡೂ) ಹಾಗಾದರೆ ಎಲ್ಲರೂ ಅಮೂಲ್ಯ, ಇದು ಸೇವಾಧಾರಿ ಕೆಲಸಗಾರರ ಗುಂಪಾಗಿದೆ. ಈ ಗುಂಪಿನ ಟೈಟಲ್ ಕೇಳಿದಿರಲ್ಲವೇ? ಈ ಟೈಟಲ್ ಕೇಳಿ ಎಲ್ಲರೂ ಖುಷಿಪಡುತ್ತಿದ್ದಾರೆ. ಇದರಲ್ಲಿಯೂ ಆದರೆ ಎಂಬುದು ಇದೆ. ಭಟ್ಟಿಯಲ್ಲಿ ಸಮಾನರಾಗಿ ಹೋಗುತ್ತೇವೆ ಎಂದು ಉದ್ದೇಶವನ್ನೂ ಇಟ್ಟಿದ್ದೀರಿ. ಕೆಲಸಗಾರರ ಗುಂಪಾಗಿದೆ, ಆದರೆ ಕೆಲಸಗಾರರಿಗೆ ಬದಲಾಗಿ ಒಮ್ಮೊಮ್ಮೆ ಏನು ಮಾಡುತ್ತೀರಿ ಗೊತ್ತಿದೆಯಾ? ಬಾಪ್ ದಾದಾ ವತನದಿಂದ ಕೆಲಸಗಾರರ ಕೆಲಸವನ್ನು ನೋಡುತ್ತಾರೆ. ಒಮ್ಮೊಮ್ಮೆ ಬಹಳ ವಿಚಿತ್ರ ಸರ್ಕಸ್ ಮಾಡುತ್ತಾರೆ. ಸರ್ಕಸನಲ್ಲಿ ಹೇಗೆ ಭಿನ್ನ ಭಿನ್ನ ವರ್ತನೆಯನ್ನು ತೋರಿಸುತ್ತಾರೋ ಹಾಗೆ ಇವರೂ ತಮ್ಮ ಸರ್ಕಸ್ ತೋರಿಸುತ್ತಾರೆ. ಆ ಸರ್ಕಸನಲ್ಲಿ ಏನೇನು ಪಾತ್ರ ಅಭಿನಯಿಸುತ್ತಾರೆಯೋ ಅವು ನೋಡಲು ಯೋಗ್ಯವಾಗಿರುತ್ತವೆ ಆದರೆ ಇಲ್ಲಿಯ ಕೆಲಸಗಾರರು ತಮ್ಮ ವಿಕರಾಳ ರೂಪವನ್ನು ತೋರಿಸುತ್ತಾರೆ. ತಮ್ಮ ದುರ್ಬಲತೆಗಳ ಮೇಲೆ ವಿಕರಾಳ ರೂಪ ಧಾರಣೆ

ಮಾಡುವ ಬದಲು ಅನ್ಯರ ವಿಕರಾಳ ರೂಪದ ಸರ್ಕಸ್ ತೋರಿಸುತ್ತಾರೆ. ವ್ಯವಹಾರದಲ್ಲಾಗಲಿ, ಪರಿವಾರದಲ್ಲಾಗಲಿ, ಪರಮಾರ್ಥದಲ್ಲಾಗಲಿ ಮೂರರಲ್ಲಿಯೂ ಈ ವಿಕರಾಳ ರೂಪದ ಸರ್ಕಸ್ ತೋರಿಸುತ್ತಾರೆ. ಮತ್ತೆ ಒಮ್ಮೊಮ್ಮೆ ವ್ಯರ್ಥ ಸಂಕಲ್ಪಗಳ ಉಯ್ಯಾಲೆಯಲ್ಲಿ ಉಯ್ಯಾಲೆಯಾಡುವ ಸರ್ಕಸ್ ತೋರಿಸುತ್ತಾರೆ. ವಾಸ್ತವದಲ್ಲಿ ಅತೀಂದ್ರಿಯ ಸುಖದ ಉಯ್ಯಾಲೆಯಲ್ಲಿ ಉಯ್ಯಾಲೆಯಾಡಬೇಕು ಆದರೆ ವ್ಯರ್ಥ ಸಂಕಲ್ಪಗಳ ಉಯ್ಯಾಲೆಯಾಡುತ್ತಾರೆ. ಮೂರನೆಯ ಯಾವ ಸರ್ಕಸ್ ತೋರಿಸುತ್ತಾರೆ? ಸ್ಥಿತಿ ಬದಲಿ ಮಾಡುವ ಸರ್ಕಸ್ ತೋರಿಸುತ್ತಾರೆ. ರೂಪ ಮತ್ತು ಸ್ಥಿತಿ ಬದಲಿಸುವ ಪಾತ್ರ ಬಹುಸಂಖ್ಯಾತರು ತೋರಿಸುತ್ತಾರೆ. ವತನದಲ್ಲಿ ಕುಳಿತು ಬಾಪ್ ದಾದಾ ಕೆಲಸಗಾರರ ಗುಂಪಿನ ಈ ಸರ್ಕಸ್ ನೋಡುತ್ತಾರೆ. ಬಹಳ ಒಳ್ಳೆಯ ಪುರುಷಾರ್ಥಿಗಳು ಆದರೆ ಪುರುಷಾರ್ಥ ಮಾಡುತ್ತಾ ಅಲ್ಲಲ್ಲಿ ಪುರುಷಾರ್ಥ ಚೆನ್ನಾಗಿ ಮಾಡಿದ ಮೇಲೆ ಪ್ರಾಲಬ್ಧವನ್ನು ಇಲ್ಲಿಯೇ ಭೋಗಿಸುವ ಇಚ್ಛೆಯಿಟ್ಟುಕೊಳ್ಳುತ್ತಾರೆ. ಆದ್ದರಿಂದ ಇಚ್ಛೆಯೂ ಇದೆ, ಚೆನ್ನಾಗಿಯೂ ಇದೆ ಆದರೆ ಪ್ರಾಲಬ್ಧವನ್ನು ಜಮಾ ಮಾಡಿಕೊಳ್ಳಬೇಕು. ಆದರೆ ಅಲ್ಲಲ್ಲಿ ತಮ್ಮ ಪುರುಷಾರ್ಥದ ಪ್ರಾಲಬ್ಧವನ್ನು ಇಲ್ಲಿ ಭೋಗಿಸುವ ಇಚ್ಛೆಯಿಂದ ಜಮಾ ಆಗುವುದನ್ನು ಕಡಿಮೆ ಮಾಡಿಕೊಳ್ಳುತ್ತಾರೆ. ತಿಳಿಯಿತೇ? ಆದ್ದರಿಂದ ಈ ಮಾತನ್ನು ಸಮಾಪ್ತಿ ಮಾಡಿ ಹೋಗಬೇಕು. ಪ್ರಾಲಬ್ದದ ಇಚ್ಛೆಯನ್ನು ಸಮಾಪ್ತಿ ಮಾಡಿ ಕೇವಲ ಒಳ್ಳೆಯ ಪುರುಷಾರ್ಥ ಮಾಡಿ, ಇಚ್ಛೆಯ ಬದಲು ಒಳ್ಳೆಯ(ಅಚ್ಛಾ) ಶಬ್ದವನ್ನು ನೆನಪಿಡಿ ತಿಳಿಯಿತೇ? ಕೆಲಸಗಾರರ ಅರ್ಥವಾಗಿದೆ ಕೆಲಸ ಮಾಡುವುದೇ ಹೊರತು ಯೋಚಿಸುವುದಲ್ಲ. ಇದು ಭರವಸೆಯ ರತ್ನಗಳ ಗುಂಪು ಎಂದು ಬಾಪ್ ದಾದಾ ತಿಳಿದಿದ್ದಾರೆ. ಭರವಸೆಯಿರುವವರು ಆಗಿದ್ದೀರಿ, ಸಾಹಸಿಗರೂ ಆಗಿದ್ದೀರಿ ಕೇವಲ ಒಂದು ಮಾತನ್ನು ಸೇರಿಸಿಕೊಳ್ಳಬೇಕು. ಸಹನಶಕ್ತಿವಂತರಾಗಬೇಕು. ನಂತರ ಭರವಸೆಯಿಂದ ಸಫಲತೆಯ ಮೂರ್ತಿಯಾಗುತ್ತೀರಿ. ತಿಳಿಯಿತೇ? ಈಗ ಭರವಸೆಯ ಮೂರ್ತಿಯಾಗಿದ್ದೀರಿ, ಈ ಒಂದು ಮಾತನ್ನು ಜೋಡಿಸುವುದರಿಂದ ಸಫಲತೆಯ ಮೂರ್ತಿಯಾಗುವಿರಿ. ಸಂಪೂರ್ಣತೆಯ ಸಮೀಪತೆಯ ಲಕ್ಷಣವಾಗಿದೆ ಸಫಲತೆ. ಎಷ್ಟೆಷ್ಟು ತಮ್ಮನ್ನು ಸಫಲತೆಯ ಮೂರ್ತಿಯಾಗಿ ನೋಡುತ್ತೀರೋ ಅಷ್ಟು ಸಂಪೂರ್ಣತೆಯ ಸಮೀಪವಿದ್ದೇವೆ ಎಂದು ತಿಳಿಯಿರಿ.

ಈ ಗುಂಪು ಸಫಲತೆಯ ಮೂರ್ತಿಯಾಗಲು ಯಾವ ಸ್ಲೋಗನ್ ಸಮ್ಮುಖದಲ್ಲಿ ಇಟ್ಟುಕೊಳ್ಳುವಿರಿ? "ಪವಿತ್ರತೆಯೇ ಸಂಗಮಯುಗದ ಸಂಪತ್ತಾಗಿದೆ" ಇದಾಗಿದೆ ಸ್ಲೋಗನ್. ಪವಿತ್ರತೆಯ ವಿಸ್ತಾರ ಎಷ್ಟಿದೆ, ಪವಿತ್ರತೆ ಯಾವುದು ಮತ್ತು ಯಾವ ಯುಕ್ತಿಗಳಿಂದ ಧಾರಣೆ ಮಾಡಬಹುದು ಎಂಬ ವಿಷಯಗಳ ಬಗ್ಗೆ ಶಿಕ್ಷಕಿಯರು ಕ್ಲಾಸ್ ಮಾಡುವರು. ಬಾಪ್ ದಾದಾ ಕೇವಲ ಟಾಪಿಕ್ ಕೊಡುತ್ತಿದ್ದಾರೆ. ಪವಿತ್ರತೆಯ ವಿಸ್ತಾರವನ್ನು ತಿಳಿದುಕೊಳ್ಳಬೇಕು. ಸಂಪೂರ್ಣ ಪವಿತ್ರತೆ ಎಂದು ಯಾವುದಕ್ಕೆ ಹೇಳಲಾಗುತ್ತದೆ? ಆದ್ದರಿಂದ ಈ ಗುಂಪಿನ ಶ್ರೇಷ್ಠ ಸ್ಲೋಗನ್ "ಪವಿತ್ರತೆಯೇ ಸಂಪತ್ತು" . ಆಗ ಪಾಸಾಗುವುದು ಸಹಜವಲ್ಲವೇ? ಸಂಪೂರ್ಣತೆ ಏನಾಗಿದೆ ಅದರ ನಾಲ್ಕು ಮಾತುಗಳ ಪರೀಕ್ಷೆ ತೆಗೆದುಕೊಳ್ಳುವೆವು, ಆದರೆ ಯಾವ ನಾಲ್ಕು ಮಾತುಗಳು ಅದನ್ನು ಹೇಳುವುದಿಲ್ಲ. ಒಳ್ಳೆಯದು.

ಅವ್ಯಕ್ತ ಮುರಳಿ 30-11-1970.

***ಕೆಲಸಗಾರರ ಅದ್ಭುತವಾದ ಸರ್ಕಸ್***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಪವಿತ್ರ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸರ್ವ ವಿಷಯಗಳಲ್ಲಿ ಸದಾ ಪಾಸ್ ಆಗುವ ಮಾಸ್ಟರ್ ಸರ್ವಶಕ್ತಿವಂತನು.

2. ನಾನು ಸರ್ವ ಶಕ್ತಿವಂತನನ್ನು ಸರ್ವ ಸಂಬಂಧಗಳಿಂದ ನನ್ನವರಾಗಿಸಿಕೊಂಡಿರುವ ಮಾಯಾಜೀತ್ ಸ್ವರೂಪ.

3. ನಾನು ಅತೀಂದ್ರಿಯ ಸುಖದ ಉಯ್ಯಾಲೆಯಲ್ಲಿ ಉಯ್ಯಾಲೆ ಆಡುತ್ತಿದ್ದೇನೆ.

4. ನಾನು ಪುರುಷಾರ್ಥದ ಪ್ರಾಲಬ್ಧವನ್ನು ಜಮಾ ಮಾಡಿಕೊಂಡಿದ್ದೇನೆ.

5. ನಾನು "ಪವಿತ್ರತೆಯೇ ಸಂಗಮ ಯುಗದ ಸಂಪತ್ತು" ಎಂಬ ಸ್ಲೋಗನ್ ಅನ್ನು ಸದಾ ಸ್ಮೃತಿಯಲ್ಲಿಟ್ಟಿದ್ದೇನೆ.